ಹಾರವೂ ನಡೆಯಿತು. ಆದರೆ ಇದಕ್ಕೆ ವಿಪರೀತ ಹಣ ವೆಚ್ಚವಾಗುತ್ತದೆ ಎಂದು ಅದನ್ನು ಕೈಬಿಟ್ಟರು. ಈಗ ಪ್ರಾಜ್ಯವಸ್ತು ಇಲಾಖೆ, ಆ ಅರಮನೆಯನ್ನು ಸಂರಕ್ಷಿಸುವ ಕೆಲಸಕ್ಕೆ ಒಂದು ಯೋಜನೆಯನ್ನು ತಯಾರಿಸಿದೆ. ಅದಕ್ಕೆ ಹಣವನ್ನೂ ಸಹ ಇಟ್ಟಿದ್ದೇವೆ. ಆ ಕೆಲಸವನ್ನು ಸದ್ಯದಲ್ಲೇ ತೆಗೆದು ಕೊಳ್ಳುತ್ತೇವೆ.

ವಿಷಯ : ರಾಜ್ಯದಲ್ಲಿ ಆರಕ್ಷಕ ವೃತ್ತ ನಿರೀಕ್ಷಕರುಗಳ ಹುದ್ದೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 659 (1522) ಶ್ರೀ ಎಂ. ಮಹಾದೇವ್ (ನಂಜನಗೂಡು)

ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

(ಅ) ರಾಜ್ಯದಲ್ಲಿ ಆರಕ್ಷಕ ವೃತ್ತ ನಿರೀಕ್ಷಕರುಗಳ ಹುದ್ದೆಗಳನ್ನು ತೆಗೆದು ಹಾಕುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಇಲ್ಲದಿದ್ದಲ್ಲಿ, ಆರಕ್ಷಕ ವೃತ್ತ ನಿರೀಕ್ಷಕ ಹುದ್ದೆಗೆ ಸಾಕಷ್ಟು ಕೆಲಸವಿಲ್ಲದ್ದರಿಂದ ಸರ್ಕಾರದ ಮಿತವ್ಯಯಗಳ ಕ್ರಮವಾಗಿ ಈ ಹುದ್ದೆಗಳನ್ನು ತೆಗೆದುಹಾಕುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ಇಲ್ಲ.

(ಆ) ಇಲ್ಲ.

(ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಸಚಿವರು ಉತ್ತರಿಸಿದರು)

ಶ್ರೀ ಎ. ಲಕ್ಷ್ಮೀಸಾಗರ್.—ಎರಡು ಪ್ರಶ್ನೆಗಳಿಗೂ ನಕಾರಾತ್ಮಕವಾದ ಉತ್ತರ.

ಶ್ರೀ ಎಂ. ಮಹಾದೇವ್.—ನಿಮ್ಮ ಹತ್ತಿರ ಇನ್ನೇನಿದೆ.

ಉಪಾಧ್ಯಕ್ಷರು.—ಪಾಪಾ, ಹೋಗಿ ಹೋಗಿ ಆ ಸರ್ಕಲ್ ಇನ್‌ಸ್ಪೆಕ್ಟರುಗಳ ಮೇಲೆ ಬಿದ್ದೀದ್ದಿರಲ್ಲ ನೀವು !

ಶ್ರೀ ಎಂ. ಮಹಾದೇವ್.—ಸ್ವಾಮಿ, ಸರ್ಕಲ್ ಇನ್‌ಸ್ಪೆಕ್ಟರ್‌ರವರ ಸಂಖ್ಯೆ ರಾಜ್ಯದಲ್ಲಿ ಎಷ್ಟಿದೆ ? ಸಬ್ ಇನ್‌ಸ್ಪೆಕ್ಟರ್‌ಗಳ ಹುದ್ದೆಗಳನ್ನು ಎಷ್ಟು ಜನಸಂಖ್ಯೆಗನುಗುಣವಾಗಿ ನೇಮಿಸಿದ್ದೀರಿ. ಧರ್ಮ ವೀರ ಅವರ ವರದಿಯನ್ನು ಕಾರ್ಯಗತ ಮಾಡಿ ಸುಧಾರಣೆ ಮಾಡಲು ಏನಾದರೂ ಕ್ರಮ ತೆಗೆದು ಕೊಂಡಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ರಾಜ್ಯದಲ್ಲಿ 155 ಸರ್ಕಲ್ಸ್ ಇವೆ, ಅಷ್ಟೇ ಸರ್ಕಲ್ ಇನ್‌ಸ್ಪೆಕ್ಟರ್‌ಗಳು ಇದ್ದಾರೆ. It is generally felt that there should be one Police Station for 50,000 population. According to this principle, the Police force is there.

ಶ್ರೀ ಎಂ. ಮಹಾದೇವ್.—ಮಾನ್ಯ ಅಧ್ಯಕ್ಷರೇ, ಎರಡು ತಾಲ್ಲೂಕಿಗೆ ಒಬ್ಬರು ಸರ್ಕಲ್ ಇನ್‌ಸ್ಪೆಕ್ಟರ್ಸ್ ಇದ್ದಾರೆ. ಇದು ಬಹಳ ಕಷ್ಟದ ಕೆಲಸ ಎನ್ನಿಸುತ್ತದೆ. ಪ್ರತಿ ತಾಲ್ಲೂಕಿಗೆ ಒಬ್ಬರು ಸರ್ಕಲ್ ಇನ್‌ಸ್ಪೆಕ್ಟರನ್ನು ನೇಮಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷರು.—ಆ ಸಲಹೆಯನ್ನು ಸೆಪರೇಟಾಗಿ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಇದು ವಿಚ್ಚಿನ ವಿಷಯ. ಅವರಿಂದ ಸರಿಯಾದ ಕೆಲಸ ಆಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು, ಅವರಿಗಿರತಕ್ಕ ಕೆಲಸದ ಒತ್ತಡ ಇವುಗಳನ್ನು ನೋಡಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ. ಈಗಿರತಕ್ಕಂಥ ಕಾನೂನು ಪ್ರಕಾರ ಸರ್ಕಲ್ ಇನ್‌ಸ್ಪೆಕ್ಟರುಗಳು ಸೂಪರ್‌ವೈಸರಿ ಕೆಲಸ ಮಾಡಬೇಕಾಗಿರುತ್ತದೆ. ಅದರ ನಂತರ ಇನ್‌ಸ್ಪೆಕ್ಷನ್ ಮಾಡಿ, ಪೋಲೀಸ್ ಠಾಣೆಗಳ ಮೇಲೆ ಉಸ್ತುವಾರಿ ಇಟ್ಟುಕೊಂಡಿರತಕ್ಕ ಕೆಲಸ ಇದೆ. ಬಹಳ ದೊಡ್ಡ ಕೇಸ್‌ಗಳನ್ನು ಎಂದರೆ ಹೀನಿಯಸ್ ಕ್ರೈಮ್ಸ್‌ನಲ್ಲಿ ತಾವೇ ಇನ್‌ವೆಸ್ಟಿಗೇಷನ್ ನಡೆಸಬೇಕೆಂದು ಇದೆ. ನಿಮ್ಮ ಸಲಹೆ ಚೆನ್ನಾಗಿ ಕಂಡರೆ, ಆಡಳಿತಾತ್ಮಕವಾಗಿ ಇದನ್ನು ನೋಡಬೇಕಾಗುತ್ತದೆ. ಅದರ ಜೊತೆಗೆ ಇದು ವಿಚ್ಚಿನ ವಿಷಯ ಎಂಬುದನ್ನೂ ತಾವು ಗಮನದಲ್ಲಿಟ್ಟುಕೊಳ್ಳಬೇಕೆಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ, ಯಾವುದಾದರೂ ಉದಾಹರಣೆ ಇಟ್ಟು ಕೊಂಡು, ಕೆಲಸ ಸರಿಯಾಗಿ ನಡೆಯದಿದ್ದರೆ, ಅದನ್ನು ಪ್ರತ್ಯೇಕವಾಗಿ ಗಮನಕ್ಕೆ ತಂದರೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಮಹಾದೇವ್.—ಅಧ್ಯಕ್ಷರೇ, 50 ಸಹಸ್ರ ಜನಸಂಖ್ಯೆಗೆ ಒಂದು ಪೋಲೀಸ್ ಸ್ಟೇಷನ್ ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. 50 ಸಹಸ್ರಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದರೂ ಕೂಡ

ಕೆಲವು ಕಡೆ ಪೋಲೀಸ್ ಠಾಣೆ ಇಲ್ಲ. ಅಂತಹ ಕಡೆ ನಾನು ಗಮನಕ್ಕೆ ತಂದರೆ, ಆದಷ್ಟು ಬೇಗ ಪೋಲೀಸ್ ಠಾಣೆ ಮಾಡಿಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿದ್ದನ್ನು ಸ್ವಲ್ಪ ಗಮನಿಸಿ. It is generally felt that there should be one Police Station for every 50,000 population. On that basis, a minimum strength of one Sub-Inspector, One Head-Constable, 5-8 Police Constables are there to carry on the normal duties. This is the general principle that is applicable.

ಉಪಾಧ್ಯಕ್ಷರು.—ಸರ್ಕಲ್ ಇನ್‌ಸ್ಪೆಕ್ಟರ್ ಪೋಸ್ಟ್ ಅಬಾಲಿಷ್ ಮಾಡಿ ಎಂದು ಹೇಳಿದ್ದೀರಲ್ಲವೇ ?

ಶ್ರೀ ಎಂ. ಮಹದೇವ್.—ಈ ಸರ್ಕಲ್ ಇನ್‌ಸ್ಪೆಕ್ಟರ್‌ಗಳು ಸೂಪರ್‌ವಿಷನ್ ಎಂದು ಸಬ್ ಇನ್‌ಸ್ಪೆಕ್ಟರುಗಳೂ ಸರಿಯಾಗಿ ಕೆಲಸ ಮಾಡಲಿಕ್ಕೆ ಅವಕಾಶ ಕೊಡುವುದಿಲ್ಲ, ಡಿ.ವೈ.ಎಸ್.ಪಿ.ಗೂ ಪ್ರಾಬ್ಲಂ ಆಗುತ್ತದೆ. ಆದುದರಿಂದ, ಇವರಿಗೆ ವೆಹಿಕಲ್ ಬೇರೆ ಕೊಟ್ಟಿದ್ದೀರಿ. ಲಾ ಆಂಡ್ ಆರ್ಡರ್ ಪ್ರಾಬ್ಲಂ ಆದಾಗ, ಸಬ್ ಇನ್‌ಸ್ಪೆಕ್ಟರ್‌ಗಳು ವೆಹಿಕಲ್ ಸ್ಪೇರ್ ಮಾಡಿ ಎಂದು ಕೇಳಿದರೂ, ಇವರು ಸ್ಪೇರ್ ಮಾಡುವುದಕ್ಕೆ ತಯಾರಾಗಿಲ್ಲ. ಇವರು ಸ್ವಂತಕ್ಕೆ ಇದನ್ನು ಉಪಯೋಗಿಸಿಕೊಂಡು ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುವುದು ಬೇಡ. ಸರ್ಕಲ್ ಇನ್‌ಸ್ಪೆಕ್ಟರ್‌ಗಳನ್ನು ಇಡುವುದರಿಂದ ಏನು ಪ್ರಯೋಜನ ಆಗುತ್ತದೆ ? ನನ್ನ ಸರ್ಕಲ್‌ನಲ್ಲಿ ಒಬ್ಬರು ಭ್ರಷ್ಟ ಸರ್ಕಲ್ ಇನ್‌ಸ್ಪೆಕ್ಟರ್ ಇದ್ದಾರೆ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ಪೆಸಿಫಿಕ್ ಆಗಿ ಯಾವುದಾದರೂ ದೂರು ಇದ್ದರೆ, ಮಾನ್ಯ ಸದಸ್ಯರು ಅದನ್ನು ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ : ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ವಿತರಣೆ

ಪ್ರಶ್ನೆ 1647 ಶ್ರೀ ಬಿ. ಆರ್. ಪಾಟೀಲ್, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಆಹಾರ ವಿತರಣೆ ಪರಿಣಾಮಕಾರಿಯಾಗಿ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇಲ್ಲಾ

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಆರ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ವಿತರಣೆ ಸರಿಯಾಗಿಲ್ಲವೆನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ ಪ್ರಶ್ನೆಗೆ ಇಲ್ಲ ಎಂದು ಉತ್ತರದಲ್ಲಿ ಇದೆ. ಎರಡನೆಯ ಪ್ರಶ್ನೆಗೆ ಉದ್ಭವಿಸುವುದಿಲ್ಲ ಎಂದು ಉತ್ತರ ಇದೆ. ಹಾಗಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಆಹಾರ ಧಾನ್ಯಗಳನ್ನು ವಿತರಣೆ ಮಾಡುವುದಕ್ಕೆ ಸಾಧ್ಯವಿಲ್ಲವೇ, ಬರೀ ಇನ್‌ಫಾರ್ಮಲ್ ರೇಷನಿಂಗ್ ಏರಿಯಾಗಳಲ್ಲಿ, ಎಂದರೆ ಪಟ್ಟಣಗಳಲ್ಲಿ ಮಾತ್ರ ಇದನ್ನು ಮಾಡುತ್ತೀರಾ ? ಗ್ರಾಮಾಂತರ ಪ್ರದೇಶಗಳಾದರೆ, ಒಬ್ಬರಿಗೆ 250 ರಿಂದ 300 ಗ್ರಾಮಗಳವರೆಗೆ ಸಕ್ಕರೆ ಕೊಡುತ್ತೀರಿ. ಬೆಂಗಳೂರು ನಗರದಲ್ಲಿ ಒಬ್ಬರಿಗೆ ಒಂದು ಕೆ.ಜಿ ಸಕ್ಕರೆ ಕೊಡುತ್ತೀರಿ. ಗ್ರಾಮೀಣ ಭಾಗದಲ್ಲಿ ಸಕ್ಕರೆ ಒಂದನ್ನು ಬಿಟ್ಟು ಬೇರೆ ಬಾಬತ್ತು ಏನೂ ಕೊಡುವುದಿಲ್ಲ. ಈ ತಾರತಮ್ಯ ಸರಕಾರ ಏತಕ್ಕೆ ಮಾಡುತ್ತಿದೆ ? ಅನ್ನ ಹಂಚುವುದರಲ್ಲಿ ಸಮಾನತೆ ಇಲ್ಲ ಎಂದರೆ ಸಂವಿಧಾನಾತ್ಮಕವಾದ ಸಮಾನತೆ ಹೇಗೆ ಪಡೆಯುವುದಕ್ಕೆ ಸಾಧ್ಯ ಇದೆ ಎಂಬುದನ್ನು ನಾನು ಇವತ್ತು ಕೇಳಬೇಕಾಗಿದೆ.

ಶ್ರೀ ಜಿ. ಬಸವಣ್ಣಪ್ಪ.—ಸ್ವಾಮಿ, ಆಹಾರ ಧಾನ್ಯಗಳ ವಿತರಣೆಗೆ, 40 ಸಾವಿರ ಜನಸಂಖ್ಯೆ ಇರುವ ನಗರಗಳಿಗೆ ಇನ್‌ಫಾರ್ಮಲ್ ರೇಷನಿಂಗ್ ಏರಿಯಾ ಎಂದು ಮಾಡುತ್ತೇವೆ. ರಾಜ್ಯದಲ್ಲಿ ಇಂತಹ 31 ನಗರಗಳಿವೆ. ಈ ಸಲ ಇನ್ನೂ ಹತ್ತು ನಗರಗಳು ಮತ್ತು ಪಟ್ಟಣಗಳನ್ನು ಇದರ ವ್ಯಾಪ್ತಿಗೆ ಸೇರಿಸುತ್ತೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ಧಾನ್ಯಗಳು ಮತ್ತು ಅಗತ್ಯವಸ್ತುಗಳನ್ನು, ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ, ಅಗತ್ಯವಿದ್ದಷ್ಟನ್ನು ವಿತರಣೆ ಮಾಡುತ್ತೇವೆ. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದೆ. ತಾರತಮ್ಯ ಇದೆ. ಅದನ್ನು ಸರಿ ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.